22	ಬಳ್ಳಾರಿ	56
23	ಕೊಪ್ಪಳ	20
24	ಬೆಳಗಾವಿ	104
25	ಬಾಗಲಕೋಟೆ	30
26	ಬಿಜಾಪುರ	46
27	ಉತ್ತರ ಕನ್ನಡ	24
28	ಧಾರವಾಡ	48
29	ಗದಗ್	34
30	ಹಾವೇರಿ	29
	ಒಟ್ಟು	**1660**

1130 ಶ್ರೀ ಬಿದರೂರು ಎಸ್. ವಿರೂಪಾಕ್ಷಪ್ಪ : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗದಗ ವಿಧಾನ ಸಭಾ ಕ್ಷೇತ್ರದ ಗದಗ್ ಬೆಟಗೇರಿ ನಗರವು 1.70 ಲಕ್ಷ ಜನ ಸಂಖ್ಯೆ ಹೊಂದಿದ್ದು, ಸರ್ಕಾರಿ ಪದವಿ ಪೂರ್ವ ಕಾಲೇಜಿನ ಅವಶ್ಯಕತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಕ್ಷೇತ್ರದಲ್ಲಿ ಒಂದೇ. ಸರ್ಕಾರಿ ಪದವಿ ಪೂರ್ವ ಕಾಲೇಜಾಗಿದ್ದು, ಖಾಸಗಿ ಪದವಿ ಪೂರ್ವ ಕಾಲೇಜುಗಳಿಂದ ಆಗತಕ್ಕಂತಹ ತೊಂದರೆ ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಇದನ್ನು ಪರಿಹರಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು?

ಶ್ರೀ ಕಾಗೇರಿ ವಿಶ್ವೇಶ್ವರ ಹೆಗಡೆ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

ಅ) ಇಲ್ಲ.

ಆ) ಇಲ್ಲ.

ಇ) ಉದ್ಭವಿಸುವುದಿಲ್ಲ.

557 ಶ್ರೀ ಸುರೇಶ್ ಬಾಬು ಸಿ.ಬಿ. (ಚಿಕ್ಕನಾಯಕನಹಳ್ಳಿ) : ಮಾನ್ಯ ಪಶುಸಂಗೋಪನಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪಶು ಆಸ್ಪತ್ರೆ ಮತ್ತು ಪಶು ಚಿಕಿತ್ಸಾ ಕೇಂದ್ರಗಳಿಗೆ ಪ್ರಾದೇಶಿಕಾವಾರು ಅವಶ್ಯಕತೆಗನುಗುಣವಾಗಿ ಔಷಧ ಮತ್ತು ವ್ಯಾಕ್ಸಿನ್ಸ್‌ಗಳನ್ನು ಹಂಚಿಕೆ ಮಾಡುತ್ತಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಪ್ರಾದೇಶಿಕವಾರು ಸಾಕಾಣಿಕೆ ಮಾಡುವ ಜಾನುವಾರುಗಳನ್ನು ಗುರುತಿಸಿ ಅದಕ್ಕೆ ತಕ್ಕಂತೆ ಅವಶ್ಯಕ ಔಷಧ ಮತ್ತು ವ್ಯಾಕ್ಸಿನ್ಸ್‌ಗಳನ್ನು ಪೂರೈಕೆ ಮಾಡಲು ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದೇ?

ಇ) ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಪಶು ಇಲಾಖೆಯಲ್ಲಿ (ಹೀಟಿವ್ಯಾಕ್ಸಿನ್ಸ್) ಕೊರತೆಯಿದ್ದು, ಕೂಡಲೇ ಒದಗಿಸಲು ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ರೇವೂ ನಾಯಕ್ ಬೆಳಮಗಿ (ಪಶುಸಂಗೋಪನಾ ಸಚಿವರು) :

ಅ) ಇಲ್ಲ.

ಆ) ಆಯಾ ಪ್ರದೇಶಗಳಲ್ಲಿ ಸಾಕಾಣಿಕೆ ಮಾಡುತ್ತಿರುವ ಜಾನುವಾರು ಸಂಖ್ಯೆಗನುಗುಣವಾಗಿ ಅವಶ್ಯವಿರುವ ಔಷಧಿಗಳನ್ನು ಸಂಬಂಧಪಟ್ಟ ಉಪ ನಿರ್ದೇಶಕರುಗಳಿಂದ ಪಡೆದು ವಂಟನ ಲಭ್ಯತೆ ಅನುಸರಿಸಿ ಖರೀದಿ ಮಾಡಿ ವಿತರಣೆ ಮಾಡಲಾಗುತ್ತಿದೆ. ಆಯಾ ಪ್ರದೇಶಗಳಿಗೆ ಅವಶ್ಯವಿರುವ ವಿವಿಧ ಲಸಿಕೆಗಳನ್ನು ಅಗತ್ಯತೆಗನುಗುಣವಾಗಿ ಪ್ರಾಣಿ ಆರೋಗ್ಯ ಮತ್ತು ಜೈವಿಕ ಸಂಸ್ಥೆ, ಬೆಂಗಳೂರು ಹಾಗೂ ಪ್ರಾದೇಶಿಕ ಪ್ರಯೋಗಶಾಲೆ (ಸಂಶೋಧನಾ ಕೇಂದ್ರ) ಗಳಿಂದ ಸರಬರಾಜು ಮಾಡಲಾಗುತ್ತಿದೆ. ಕಾಲು ಬಾಯಿ ಜ್ವರದ ಲಸಿಕೆಯನ್ನು ಲಭ್ಯವಿರುವ ಅನುದಾನದಲ್ಲಿ ಇಲಾಖೆಯಿಂದ ಖರೀದಿಸಿ ಜಾನುವಾರು ಸಂಖ್ಯೆ ಹಾಗೂ ಬೇಡಿಕೆಗನುಗುಣವಾಗಿ ವಿತರಣೆ ಮಾಡಲಾಗುತ್ತಿದೆ.

ಇ) ಹೆಬ್ಬಾಳದಲ್ಲಿನ ಪಶು ಆರೋಗ್ಯ ಮತ್ತು ಜೈವಿಕ ಸಂಸ್ಥೆಯಲ್ಲಿ ಕೆಲವು ತಾಂತ್ರಿಕ ತೊಂದರೆಗಳಿಂದ ಲಸಿಕೆ ಉತ್ಪಾದನೆಯಲ್ಲಿ ವ್ಯತ್ಯಯವಾಗಲಾಗಿ ಚಿಕ್ಕನಾಯಕನಹಳ್ಳಿ ತಾಲ್ಲೂಕಿನಲ್ಲಿ 2009 ಮೇ ಮಾಹೆಯಲ್ಲಿ ಕರುಳು ಬೇನೆ ಲಸಿಕೆ ಸರಬರಾಜಿನಲ್ಲಿ ಕೊಂಚ ವ್ಯತ್ಯಯವಾಗಿರುತ್ತದೆ. ತದನಂತರ ಸದರಿ ತೊಂದರೆಯನ್ನು ಸರಿಪಡಿಸಲಾಗಿ ಈಗ ಲಸಿಕೆ ಉತ್ಪಾದನೆ ನಿರಂತರವಾಗಿ ನಡೆದಿದ್ದು ಚಿಕ್ಕನಾಯಕನಹಳ್ಳಿ ತಾಲ್ಲೂಕಿಗೆ ಈಗಾಗಲೇ 27.000 ಡೋಸ್ ಲಸಿಕೆ ಸರಬರಾಜು ಮಾಡಲಾಗಿದೆ.

557 Sri Suresh Babu. C.B.(Chikkanayakanahalli) : Hon'ble Minister for Animal Husbandry kindly answer to the below question?

a) Whether it has come to the notice of the Government that medicines and vaccines are not supplied to veterinary dispensaries and veterinary hospitals as per regional requirement?

b) Whether suitable action will be taken to supply necessary medicines and vaccines based on the livestock reared in that region?

c) There is deficit of entero Toxemia (ET) vaccine in Veterinary Department of Chikkanayakanahalli taluk, whether immediate action is taken to supply the same?

Sri Revunayak Belamagi (Minister for Animal Husbandry) :

a) No.

b) Medicine requirement is obtained from the concerned Deputy Directors based on livestock population and make purchase based on the availability of budget and distribute medicines. The requirement of medicines for various places are supplied by the Veterinary Biological (IAH and VB), Hebbal, Bangalore. Foot and Mouth vaccine is purchased by the Department from out of the budget available and made supply based on the requirement and livestock population.

c) There was hindrance in the supply of E.T. vaccine to Chikkanayakanahalli taluk, during May 2009 due to some technical problems in the production of vaccine at Institute of Animal Health and Veterinary Biological at Hebbal. However the technical problem has been rectified and corrected. Now, there is no problem for production of E.T. is continued and 27.000 doses of vaccine are already supplied to Chikkanayakanahalli Taluk.

909 ಶ್ರೀ ಮಂಜುನಾಥ್ ಹೆಚ್.ಪಿ. (ಹುಣಸೂರು) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ ಸಂಬಂಧಿಸಿದಂತೆ ಹುಣಸೂರು ತಾಲ್ಲೂಕಿಗೆ ಸಂಬಂಧಿಸಿದಂತೆ 2008-09 ಮತ್ತು 2009-10ನೇ ಸಾಲಿನಲ್ಲಿ ಯೋಜನೆ ಹಾಗೂ ಯೋಜನೇತರ ಕಾರ್ಯಕ್ರಮಗಳಡಿ ಲೆಕ್ಕಶೀರ್ಷಿಕೆ ವಾರು ಬಿಡುಗಡೆಗೊಂಡಿರುವ ಹಾಗೂ ಬಿಡುಗಡೆಗೊಳ್ಳುತ್ತಿರುವ ಅನುದಾನವೆಷ್ಟು (ವಿವರ ನೀಡುವುದು)?